KATK010033472020

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.205/2020</u>**

ಪ್ರಾ.ಸಾ. : **5**

ದೋ.ಸಾ. : **2**

ದಿ.**10.12.2025**

ಹೆಸರು : ಮೋಹನ್ ಕುಮಾರ್ ಜಿ.ವಿ.

ತಂದೆಯ ಹೆಸರು : ಲೇಟ್ ಪಿ.ವೀರಭದ್ರಯ್ಯ

ವಯಸ್ಸು : **50** ವರ್ಷ

ಉದ್ಯೋಗ : ತಹಸೀಲ್ದಾರ್, ತಿಪಟೂರು

ವಾಸಸ್ಥಳ : ತಿಪಟೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

1. ದಿ.18.11.2019 ರಿಂದ 25.11.2022 ರವರೆಗೆ ನಾನು ತುಮಕೂರು ತಾಲ್ಲೂಕು ತಹಸೀಲ್ದಾರ್ ಆಗಿ ಕೆಲಸ ನಿರ್ವಹಿಸಿರುತ್ತೇನೆ.
2. ದಿ.25.06.2020 ರಂದು ಸಂಜೆ 4.30 ಗಂಟೆಗೆ ನಾನು ನನ್ನ ಕಚೇರಿಯಲ್ಲಿದ್ದಾಗ ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಯ ಪಿಎಸ್ಐ ರವರು ಒಂದು ಪತ್ರವನ್ನು ನೀಡಿ, ಅಹೋಬಲ ಅಗ್ರಹಾರದ ದೊಡ್ಡತಿಮ್ಮಯ್ಯನವರು ತನ್ನ ಜಮೀನಿನಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿ, ತಿಪಟೂರಿಗೆ ಹೋಗುವಾಗ ಸಿಕ್ಕಿ ಬಿದ್ದಿದ್ದಾರೆ, ಆ ಬಗ್ಗೆ ಒಬ್ಬ ಪತ್ರಾಂಕಿತ ಅಧಿಕಾರಿ ಮತ್ತು ಒಬ್ಬ ಪಂಚರನ್ನು ಕಳುಹಿಸಬೇಕೆಂದು ಕೋರಿಕೆ ಸಲ್ಲಿಸಿರುತ್ತಾರೆ. ನನಗೆ ಕಳುಹಿಸಿದ ಆ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ27 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ27(ಎ) ಎಂದು ಗುರುತಿಸಲಾಯಿತು.
3. ಆ ಪತ್ರ ನೀಡಿದ ಆಧಾರದ ಮೇಲೆ ನಾನು ನಮ್ಮ ಕಚೇರಿಯ ಸಿಬ್ಬಂದಿಯವರಾದ ಪ್ರಥಮ ದರ್ಜೆ ಸಹಾಯಕರಾದ ಚಂದ್ರಕಾಂತ್ ಮತ್ತು ದ್ವಿತೀಯ ದರ್ಜೆ

ಸಹಾಯಕರಾದ ಚೇತನ್ ಶಿವುರವರನ್ನು ಜೊತೆಯಲ್ಲಿ ಕರೆದುಕೊಂಡು ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಗೆ ಹೋಗಿ, ಅಲ್ಲಿಂದ ಪೋಲೀಸರ ಜೊತೆಗೆ ಅಹೋಬಲ ಅಗ್ರಹಾರ ಗ್ರಾಮದ ದೊಡ್ಡತಿಮ್ಮಯ್ಯನವರ ತೋಟದ ಬಳಿ ಹೋದೆವು. ಅಲ್ಲಿ ಪಿಎಸ್‌ಐ ಮತ್ತು ಪೋಲೀಸ್ ಸಿಬ್ಬಂದಿಯವರು ಒಬ್ಬ ವ್ಯಕ್ತಿಯನ್ನು ಹಿಡಿದುಕೊಂಡಿದ್ದರು. ಆ ಸ್ಥಳದಲ್ಲಿ ಅವರನ್ನು ವಿಚಾರಿಸಿದಾಗ ಅವರ ಹೆಸರು ದೊಡ್ಡತಿಮ್ಮಯ್ಯ ಎಂದು ಹೇಳಿದರು. ನಾವು ಸ್ಥಳಕ್ಕೆ ಹೋಗಿ ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ಪಡೆದು, ನಂತರ ಪರಸ್ಪರ ನಮ್ಮ ಅಂಗಶೋಧನೆಯನ್ನು ಮಾಡಿಕೊಂಡೆವು. ಅಂಗಶೋಧನೆ ಜ್ಞಾಪನವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ28 ಎಂದು ಗುರುತಿಸಲಾಯಿತು. ಆ ದಿನ ಮಳೆ ಇದ್ದುದರಿಂದ ಮತ್ತು ಕಣ್ತಪ್ಪಿನಿಂದ ನಾನು ಸಹಿ ಮಾಡಿಲ್ಲ.

**4.** ಸಾಯಂಕಾಲ 6.15 ಗಂಟೆಗೆ ಆ ವ್ಯಕ್ತಿಯನ್ನು ನಿನ್ನ ಬಳಿ ಮಾದಕ ವಸ್ತು ಇದೆಯೇ, ನಿನ್ನ ಅಂಗಶೋಧನೆ ಮಾಡಬಹುದೇ ಎಂದು ಕೇಳಿದಾಗ ಆತ ಒಪ್ಪಿಗೆಯನ್ನು ಸೂಚಿಸಿರುತ್ತಾನೆ. ನಿನ್ನ ಅಂಗಶೋಧನೆಯನ್ನು ಮ್ಯಾಜಿಸ್ಟ್ರೇಟ್ ಸಮಕ್ಷಮ ಮಾಡಿಸಬೇಕೇ ಅಥವಾ ನಾನೇ ಪತ್ರಾಂಕಿತ ಅಧಿಕಾರಿಯಾಗಿ ಅಂಗಶೋಧನೆ ಮಾಡಬಹುದೇ ಎಂದು ಕೇಳಿದಾಗ ನೀವೇ ಅಂಗಶೋಧನೆ ಮಾಡಬಹುದು ಎಂದು ಹೇಳಿದನು. ಅಂಗಶೋಧನಾ ಜ್ಞಾಪನಕ್ಕೆ ಆರೋಪಿ ಸಹಿ ಮಾಡಿರುತ್ತಾನೆ. ಆ ಸಹಿಯನ್ನು ನಿಶಾನೆ ಪಿ28(ಎ) ಎಂದು ಗುರುತಿಸಲಾಯಿತು. ದೊಡ್ಡತಿಮ್ಮಯ್ಯನನ್ನು ತಪಾಸಣೆ ಮಾಡಿದಾಗ ಆತನ ಕೈಯಲ್ಲಿ ಒಂದು ಚೀಲ ಇತ್ತು. ಆ ಚೀಲದಲ್ಲಿ ಗಾಂಜಾದ ಹಸಿ ಗಿಡಗಳು ಇದ್ದವು. ಆತನ ಕೈಯಲ್ಲಿದ್ದ ಚೀಲದಲ್ಲಿರುವ ಗಾಂಜಾ ಗಿಡಗಳನ್ನು ನಾನೇ ಬೆಳೆಸಿದ್ದು ಎಂದು ಆತ ಹೇಳಿದನು. ಆ ಗಿಡಗಳ ಸೊಪ್ಪುಗಳನ್ನು ನಾನು ಮತ್ತು ಪಿಎಸ್‌ಐ ಕೈಯಲ್ಲಿ ಉಜ್ಜಿ ವಾಸನೆ ನೋಡಿದಾಗ ಘಾಟು ವಾಸನೆ ಬಂದಿದ್ದರಿಂದ ಅವು ಗಾಂಜಾ ಗಿಡಗಳು ಎಂದು ಖಾತ್ರಿಯಾಯಿತು. ಆ ಗಿಡಗಳಲ್ಲಿ ಗಾಂಜಾ ಸೊಪ್ಪು, ರೆಂಬೆ, ಬೀಜ ಮತ್ತು ತೆನೆ ಇದ್ದವು. ಒಟ್ಟು 5 ಗಿಡಗಳು ಇದ್ದವು. ಈ ರೀತಿಯಾಗಿ ತಪಾಸಣೆ ಮಾಡಿದಾಗ ಮಳೆ ಬಂದಿದ್ದರಿಂದ 50 ಮೀಟರ್ ದೂರದಲ್ಲಿರುವ ಆರೋಪಿಯ ಮನೆಯ ಕಡೆಗೆ ಹೋಗಿ ಅಲ್ಲಿ ಆ ಗಿಡಗಳನ್ನು ತೂಕ ಮಾಡಿದೆವು. ಆ ಮನೆಯ ಮುಂದುಗಡೆ ಚಪ್ಪರದ ಅಡಿಯಲ್ಲಿ ಲೈಟ್ ಬೆಳಕಿನ ಸಹಾಯದಿಂದ ತೂಕ

ಮಾಡಿದೆವು. ಪೋಲೀಸರೇ ತಂದಿದ್ದ ತೂಕದ ಯಂತ್ರದಿಂದ ತೂಕ ಮಾಡಿದೆವು. ಚೀಲದ ಸಮೇತ ತೂಕ ಹಾಕಿದಾಗ **4** ಕೆಜಿ **200** ಗ್ರಾಂ ತೂಕ ಇತ್ತು. ಚೀಲ ತೆಗೆದು ತೂಕ ಮಾಡಿದಾಗ **3** ಕೆಜಿ **900** ಗ್ರಾಂ ತೂಕ ಇತ್ತು. ನಂತರ ಆ ಗಾಂಜಾ ಗಿಡಗಳನ್ನು ಒಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಬಾಯಿಯನ್ನು ದಾರದಿಂದ ಕಟ್ಟಿ ಎಸ್ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗಿನ ಸಹಾಯದಿಂದ ಸೀಲ್ ಮಾಡಲಾಯಿತು.

**5.** ನಂತರ ಆರೋಪಿ ದೊಡ್ಡತಿಮ್ಮಯ್ಯ ಆ ಗಾಂಜಾ ಗಿಡಗಳನ್ನು ಬೆಳೆದಿದ್ದ ಜಾಗಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ಆತನ ಜಮೀನಿನ ಬದುವಿನ ಪಕ್ಕದ ಕಾಲುವೆ ಪಕ್ಕದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿದ್ದೇನೆಂದು ಹೇಳಿದನು. ಅಲ್ಲಿ ಗಾಂಜಾ ಗಿಡಗಳನ್ನು ಕಿತ್ತಿದ್ದ ಗುಂಡಿಗಳು ಕಂಡುಬಂದವು. ಆ ದಿನ ಸಿಕ್ಕ ದೊಡತಿಮ್ಮಯ್ಯ ಈಗ ನ್ಯಾಯಾಲಯದ ಮುಂದೆ ಇದ್ದಾನೆ. ನಂತರ ಸ್ಥಳದಲ್ಲಿ ಮಹಜರ್ ಮಾಡಲಾಯಿತು. ಆ ದಿನ ಮಾಡಿದ ಮಹಜರನ್ನು ನಿಶಾನೆ ಪಿ**1** ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**1(**ಸಿ**)** ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಮಹಜರ್ ಮಾಡುವಾಗ ತೆಗೆದ ಫೋಟೋಗಳನ್ನು ನಿಶಾನೆ ಪಿ**4** ರಿಂದ **23** ಎಂದು ಗುರುತಿಸಲಾಗಿದೆ. ಮಹಜರ್ ಇರುವ ಸಿಡಿಯನ್ನು ನಿಶಾನೆ ಪಿ**3** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು :**

(ಈ ಹಂತದಲ್ಲಿ ಆರೋಪಿ ಪರ ವಕೀಲರಾದ ಶ್ರೀ.ಟಿ.ಎಸ್.ಕೃಷ್ಣಶಾಸ್ತ್ರಿಯವರು ವಕಾಲತ್ ನಿಂದ ನಿವೃತ್ತಿಯಾಗುತ್ತೇನೆಂದು ಮೆಮೋ ಸಲ್ಲಿಸಿರುವುದರಿಂದ ವಕಾಲತ್ ನಿಂದ ನಿವೃತ್ತಿಯಾಗಲು ಅನುಮತಿ ನೀಡಲಾಯಿತು. ಆರೋಪಿ ತನಗೆ ಸರ್ಕಾರದಿಂದ ವಕೀಲರನ್ನು ನೇಮಕ ಮಾಡಿಕೊಡಬೇಕೆಂದು ಕೋರಿಕೆ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿನಾಂಕ**.29.04.2026** ರಂದು ಕರೆಯಿಸಿ**,** ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು**.**

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ :**

**6.** ದಿ.25.06.2020 ರಂದು ಪಿಎಸ್‌ಐ ರವರು ಪಿಸಿಯವರ ಮುಖಾಂತರ ಒಂದು ಪತ್ರವನ್ನು ಮಾತ್ರ ಕಳುಹಿಸಿಕೊಟ್ಟರು, ಅದರ ಜೊತೆಗೆ ಬೇರೆ ದಾಖಲೆಯನ್ನು ಕಳುಹಿಸಿಕೊಟ್ಟಿಲ್ಲ. ಆ ದಿನ ಪೋಲೀಸ್ ಠಾಣೆಯಿಂದ ನಾನು ನನ್ನ ವಾಹನದಲ್ಲಿ ಹೋದೆನು, ಪೋಲೀಸರು ಅವರ ವಾಹನದಲ್ಲಿ ಬಂದರು. ಎರಡೂ ವಾಹನಗಳು ಒಂದೇ ಸಮಯಕ್ಕೆ ಘಟನಾ ಸ್ಥಳಕ್ಕೆ ತಲುಪಿದವು. ಜಾಗ ತೋರಿಸಲು ಮೊದಲು ಪೋಲೀಸರು ಹೋದರು. ಸದರಿ ಸ್ಥಳ ಕೋರಾ ಕಂದಾಯ ವ್ಯಾಪ್ತಿಯಲ್ಲಿ ಬರುತ್ತದೆ. ಕೋರಾ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುತ್ತದೆಯೇ ಎಂದು ನನಗೆ ಗೊತ್ತಿಲ್ಲ. ಆ ಸ್ಥಳಕ್ಕೆ ಹೋದಾಗ ಸಂಜೆ 6.15 ಗಂಟೆಯಾಗಿತ್ತು. ಆರೋಪಿ ಆ ದಿನ ನಾವು ಹೋದಾಗ ಅವರ ಜಮೀನಿನಲ್ಲಿ ಚೀಲ ಹಿಡಿದುಕೊಂಡು ನಿಂತಿದ್ದರು. ಆರೋಪಿಯ ಜೊತೆಗೆ ಬೇರೆ ಯಾರೂ ಇರಲಿಲ್ಲ. ಪೋಲೀಸರು ಇದ್ದರು. ಆರೋಪಿ ಆ ದಿನ ಚೀಲ ಹಿಡಿದುಕೊಂಡು ಅವರ ಜಮೀನಿನಲ್ಲಿ ನಿಂತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡತಿಮ್ಮಯ್ಯನ ತೋಟದ ಚಕ್ಕುಬಂದಿಯನ್ನು ಕಡತ ನೋಡಿ ಹೇಳಬೇಕು. ಸ್ಥಳಕ್ಕೆ ಹೋಗುವ ಮೊದಲು ಈ ಪ್ರಕರಣದ ಬಗ್ಗೆ ಮಾಹಿತಿ ಇತ್ತು. ಅಂಗಶೋಧನಾ ಜ್ಞಾಪನವನ್ನು ನಾನೇ ಕೊಟ್ಟಿದ್ದು. ಅಂಗಶೋಧನಾ ಜ್ಞಾಪನವನ್ನು ನಾನೇ ಕೊಟ್ಟಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ28 ಅಂಗಶೋಧನಾ ಜ್ಞಾಪನದಲ್ಲಿ ನನ್ನ ಸಹಿ ಇರುವುದಿಲ್ಲ. ಪಿಎಸ್‌ಐ ರವರು ಸಹಿ ಮಾಡಿದ್ದಾರೆ. ನಾನು ಸ್ಥಳದಲ್ಲಿ ಅಂಗಶೋಧನಾ ಜ್ಞಾಪನವನ್ನು ತಯಾರಿಸಿ, ಆರೋಪಿಯ ಅಂಗಶೋಧನೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**7.** ತೋಟದ ಜಮೀನಿನಿಂದ ಆರೋಪಿಯ ಮನೆಗೆ 50 ಮೀಟರ್ ದೂರ. ಆರೋಪಿ ನಿಂತಿದ್ದ ಜಾಗದ ಸುತ್ತಮುತ್ತ ಅಡಿಕೆ ತೋಟ, ಹೂವಿನ ಗಿಡಗಳು ಇದ್ದವು. ಯಾವ ಹೂವಿನ ಗಿಡಗಳು ಇದ್ದವು ಎಂದು ಮಾಹಿತಿ ಇಲ್ಲ. ರಸ್ತೆಯಲ್ಲಿ ಜೀಪು ನಿಂತ ಸ್ಥಳದಿಂದ ಆರೋಪಿಯ ಜಮೀನು ಎಷ್ಟು ದೂರ ಇತ್ತು ಎಂದು ನೆನಪಿಲ್ಲ. ನಿಶಾನೆ

ಪಿ28 ಕ್ಕೆ ಆರೋಪಿ ಸಹಿ ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಕೈಯಲ್ಲಿ ಎಂತಹ ಚೀಲ ಇತ್ತು ಎಂದು ಮತ್ತು ಅದರ ಬಣ್ಣವನ್ನು ಕಡತ ನೋಡಿ ಹೇಳಬೇಕು. ಅದರ ಉದ್ದವನ್ನು ಅಳತೆ ಮಾಡಿಲ್ಲ. ಚೀಲದಲ್ಲಿ ಎಷ್ಟು ಎತ್ತರದ ಗಿಡ ಇತ್ತು ಮತ್ತು ಎಷ್ಟು ಕೊಂಬೆಗಳು ಇದ್ದವು ಎಂದು ನೆನಪಿಲ್ಲ. ದೊಡ್ಡತಿಮ್ಮಯ್ಯನನ್ನು ತಪಾಸಣೆ ಮಾಡಿದಾಗ ಆತನ ಕೈಯಲ್ಲಿ ಒಂದು ಚೀಲ ಇತ್ತು, ಆ ಚೀಲದಲ್ಲಿ ಗಾಂಜಾದ ಹಸಿ ಗಿಡಗಳು ಇದ್ದವು, ಆತನ ಕೈಯಲ್ಲಿದ್ದ ಚೀಲದಲ್ಲಿರುವ ಗಾಂಜಾ ಗಿಡಗಳನ್ನು ನಾನೇ ಬೆಳೆಸಿದ್ದು ಎಂದು ಆತ ಹೇಳಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಂಜಾ ಗಿಡದ ಎಷ್ಟು ಎಲೆಗಳನ್ನು ಉಜ್ಜಿ ವಾಸನೆ ನೋಡಿದೆವು ಎಂದು ಈಗ ನೆನಪಿಲ್ಲ. ಆ ಎಲೆ ಹುಡಿ ಆಯಿತೇ ಎಂದು ಗೊತ್ತಿಲ್ಲ, ಘಾಟು ವಾಸನೆ ಬರುತ್ತಿತ್ತು. ಆ ಎಲೆಯನ್ನು ಕೂಡಾ ತೂಕ ಮಾಡುವಾಗ ಹಾಕಿದೆವು. ಕೈಯಲ್ಲಿ ಉಜ್ಜಿದಾಗ ಅನೇಕ ಎಲೆಗಳು ವಾಸನೆ ಬರುತ್ತವೆ, ಆ ಸಂದರ್ಭದಲ್ಲಿ ಎಲೆಗಳನ್ನು ಉಜ್ಜಿ ನೋಡಿದಾಗ ಘಾಟು ವಾಸನೆ ಬಂದಿದ್ದರಿಂದ ಗಾಂಜಾ ಎಂದು ಗೊತ್ತಾಯಿತು.

**8.** ಆ ಗಿಡಗಳಲ್ಲಿ ಗಾಂಜಾ ಸೊಪ್ಪು, ರೆಂಬೆ, ಬೀಜ ಮತ್ತು ತೆನೆ ಇದ್ದವು, ಒಟ್ಟು 5 ಗಿಡಗಳು ಇದ್ದವು, ಈ ರೀತಿಯಾಗಿ ತಪಾಸಣೆ ಮಾಡಿದಾಗ ಮಳೆ ಬಂದಿದ್ದರಿಂದ 50 ಮೀಟರ್ ದೂರದಲ್ಲಿರುವ ಆರೋಪಿಯ ಮನೆಯ ಕಡೆಗೆ ಹೋಗಿ ಅಲ್ಲಿ ಆ ಗಿಡಗಳನ್ನು ತೂಕ ಮಾಡಿದೆವು, ಆ ಮನೆಯ ಮುಂದುಗಡೆ ಚಪ್ಪರದ ಅಡಿಯಲ್ಲಿ ಲೈಟ್ ಬೆಳಕಿನ ಸಹಾಯದಿಂದ ತೂಕ ಮಾಡಿದೆವು, ಪೋಲೀಸರೇ ತಂದಿದ್ದ ತೂಕದ ಯಂತ್ರದಿಂದ ತೂಕ ಮಾಡಿದೆವು, ಚೀಲದ ಸಮೇತ ತೂಕ ಹಾಕಿದಾಗ 4 ಕೆಜಿ 200 ಗ್ರಾಂ ತೂಕ ಇತ್ತು, ಚೀಲ ತೆಗೆದು ತೂಕ ಮಾಡಿದಾಗ 3 ಕೆಜಿ 900 ಗ್ರಾಂ ತೂಕ ಇತ್ತು, ನಂತರ ಆ ಗಾಂಜಾ ಗಿಡಗಳನ್ನು ಒಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ಬಾಯಿಯನ್ನು ದಾರದಿಂದ ಕಟ್ಟಿ ಎಸ್ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗಿನ ಸಹಾಯದಿಂದ ಸೀಲ್ ಮಾಡಲಾಯಿತು, ನಂತರ ಆರೋಪಿ ದೊಡ್ಡತಿಮ್ಮಯ್ಯ ಆ ಗಾಂಜಾ ಗಿಡಗಳನ್ನು ಬೆಳೆದಿದ್ದ ಜಾಗಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ಆತನ ಜಮೀನಿನ ಬದುವಿನ ಪಕ್ಕದ ಕಾಲುವೆ ಪಕ್ಕದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿದ್ದೇನೆಂದು ಹೇಳಿದನು, ಅಲ್ಲಿ ಗಾಂಜಾ ಗಿಡಗಳನ್ನು ಕಿತ್ತಿದ್ದ ಗುಂಡಿಗಳು ಕಂಡುಬಂದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಆರೋಪಿಯ ಮನೆಯಲ್ಲಿ ಯಾರಿದ್ದರು ಎಂದು ನನಗೆ ಮಾಹಿತಿ ಇಲ್ಲ.

**9.** ಗುಂಡಿ ಇದ್ದ ಜಾಗ ಆರೋಪಿಗೇ ಸೇರಿದ್ದು. ಅದರ ಬಗ್ಗೆ ದಾಖಲೆ ನೋಡಿದ್ದೇನೆ. ಆರೋಪಿ ಆ ಸ್ಥಳವನ್ನು ತೋರಿಸಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸ್ಥಳ ಆರೋಪಿಗೆ ಸೇರಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ಗುಂಡಿಗಳು ಎಷ್ಟು ದೂರದಲ್ಲಿದ್ದವು ಎಂದು ಗೊತ್ತಿಲ್ಲ. ಅವುಗಳ ಉದ್ದ, ಅಗಲ ಮತ್ತು ಆಳ ಗೊತ್ತಿಲ್ಲ. ಗಿಡಗಳ ಹತ್ತಿರ ಬೇರುಗಳು, ಎಲೆಗಳು ಇದ್ದವು. ಆ 5 ಗುಂಡಿಗಳ ಸ್ಥಳದ ಚಕ್ಕುಬಂದಿಯನ್ನು ನೋಡಿ ಹೇಳಬೇಕು. ಆ ಜಾಗದ ಸುತ್ತಮುತ್ತ ತೋಟಗಳು ಇದ್ದವು. ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಮತ್ತು ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು